**CC 1096/2019**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ**
**ನ್ಯಾಯಾಲಯ, ಹೊಸಪೇಟೆ.**
**ಸಿಸಿ ನಂಬರ್** 1096/2019

**ಸಿ ಡಬ್ಲ್ಯೂ -4**
**ಪಿ ಡಬ್ಲ್ಯೂ - 3**

| | |
|---|---|
| **ಸಾಕ್ಷಿಯ ಹೆಸರು -** | **ನರಸಿಂಹಯ್ಯ** |
| **ತಂದೆಯ ಹೆಸರು -** | **ಚಂಚಯ್ಯ** |
| **ವಯಸ್ಸು -** | **61 ವರ್ಷಗಳು** |
| **ಉದ್ಯೋಗ -** | **ನಿವೃತ್ತ ಬ್ಯಾಂಕ್ ನೌಕರ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ 07-08-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನಾನು ಬಿ ಡಿ ಸಿ ಸಿ ಬ್ಯಾಂಕ್ ನಲ್ಲಿ **2019** ರಿಂದ **2024** ರವರೆಗೆ ಕೆಲಸ ಮಾಡಿರುತ್ತೇನೆ.

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ವಿವಾದಿತ ದಾಖಲೆಗಳ ಜಪ್ತು ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ **13** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **13 (ಎ)** ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಈಗ್ಗೆ **5-6** ವರ್ಷಗಳ ಹಿಂದೆ ಗಾಂಧಿ ವೃತ್ತದ ಬಳಿ ಇರುವ ನಮ್ಮ ಬ್ಯಾಂಕ್ ನ ಬಜಾರ್ ಶಾಖೆಯಲ್ಲಿ ಮಾಡಿರುತ್ತೇನೆ. ಪೋಲಿಸರು ನಮ್ಮ ಸದರಿ ಶಾಖೆಗೆ ಬಂದಾಗ ಮುಖ್ಯ ಕಚೇರಿಯಿಂದ ಪಂಚನಾಮೆಗೆ ಹೋಗುವಂತೆ ತಿಳಿಸಿದಾಗ ನಾನು ಅಲ್ಲಿಗೆ ಹೋಗಿರುತ್ತೇನೆ.

ಪೋಲಿಸರು ಕೆಲವು ದಾಖಲೆಗಳನ್ನು ಜಪ್ತು ಪಡಿಸಿಕೊಂಡು ಪಂಚನಾಮೆ ಮಾಡಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 01.40 ಗಂಟೆಯ ನಂತರ ಮಾಡಿರುತ್ತಾರೆ.

ಈಗ ನಾನು ನೋಡುತ್ತಿರುವ ಇನ್ನೊಂದು ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಪಿರ್ಯಾದುದಾರರು ಪ್ರಮಾಣೀಕರಿಸಿದ ದಾಖಲೆಗಳ ಜಪ್ತು ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ 14 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 14(ಎ) ಎಂದು ಗುರುತಿಸಲಾಯಿತು.

ಸದರಿ ಪಂಚನಾಮೆಗೆ ಅದೇ ದಿನ, ನಮ್ಮ ಬ್ಯಾಂಕ್ ನ ಬಜಾರ್ ಶಾಖೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಯಾವ ಕಾರಣಕ್ಕೆ ಮಾಡಿದ್ದರು ಎಂದು ನನಗೆ ನೆನಪಿಲ್ಲ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 01.40 ಗಂಟೆಯ ನಂತರ ಮಾಡಿರುತ್ತಾರೆ.

ಈಗ ನಾನು ನೋಡುತ್ತಿರುವ 2 ಪೋಟೋಗಳಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಪೋಟೋಗಳನ್ನು ಒಟ್ಟಾಗಿ ನಿಪಿಃ 15 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 17-06-2019 ರಂದು ನಿಪಿಃ 13 ರ ಪಂಚನಾಮೆಯನ್ನು ಆರೋಪಿತನಿಂದ ಪಿಗಮಿ ಠೇವಣಿ ಮತ್ತು ಇತರೆ ದಾಖಲೆಗಳನ್ನು ಜಪ್ತು ಪಡಿಸಿಕೊಂಡಾಗ ಮಾಡಲಾಗಿತ್ತು ಅಂದರೆ ಸರಿಯಲ್ಲ.

**CC 1096/2019**

**ಸಿ ಡಬ್ಲೂ -4**
**ಪಿ ಡಬ್ಲೂ - 3**

ನನ್ನ ಸಮಕ್ಷಮ ಸದರಿ ದಾಖಲೆಗಳನ್ನು ಜಪ್ತು ಪಡಿಸಿಕೊಂಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಅದೇ ದಿನ ಪೋಲಿಸರು ನಿಪಿಃ 14 ರ ಪಂಚನಾಮೆಯನ್ನು ಮಾಡಿ ನನ್ನ ಸಮಕ್ಷಮ ಪಿಗಮಿ ಠೇವಣಿ ಅರ್ಜಿಗಳನ್ನು ಜಪುತ ಪಡಿಸಿಕೊಂಡಿದ್ದರು ಅಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಕೆ., ವಕೀಲರಿಂದ**

ಪಂಚನಾಮೆಗಳನ್ನು ಯಾರು ಬರೆದರು ಮತ್ತು ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ಸ್ಥಳದಲ್ಲಿ ಎಷ್ಟು ಜನ ಪೋಲಿಸರು ಇದ್ದರು ಮತ್ತು ಎಷ್ಟು ಜನ ಸಾರ್ವಜನಿಕರು ಸೇರಿದ್ದರು ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ಪೋಲಿಸರು ಬರೆದಿದ್ದ ಪಂಚನಾಮೆಗೆ ಸಹಿ ಮಾಡು ಎಂದ್ದದ್ದರಿಂದ ಸಹಿ ಮಾಡಿರುತ್ತೇನೆ ಅಂದರೆ ಸರಿ. ನನ್ನ ಸಮಕ್ಷಮ ಜಪ್ತು ಮಾಡಲಾಯಿತು ಎನ್ನಲಾದ ಪಿಗಮಿ ಠೇವಣಿ ಅರ್ಜಿ ಯಾರು ಸಲ್ಲಿಸಿದ್ದರು ಮತ್ತು ಅದರಲ್ಲಿನ ಸಹಿ ಯಾರದ್ದು ಎಂದು ನಾನೇನು ಗುರುತಿಸಿಲ್ಲ ಅಂದರೆ ಸರಿ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.